**ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ**

**"ಸೌಹಾರ್ದ ಭಾರತ" ಕೃತಿಯ ಜನಾರ್ಪಣೆ**

**Date:10-01-2026**




ಪ್ರಗತಿಪರ ಚಿಂತಕರು ಹಾಗೂ ಬಂಡಾಯ ಸಾಹಿತಿ ನಾಡೋಜ ಬರಗೂರು ರಾಮಚಂದ್ರಪ್ಪನವರ "ಸೌಹಾರ್ದ ಭಾರತ " ಕೃತಿಯನ್ನು ಬೆಂಗಳೂರು ನಗರದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ . ಬಿಡುಗಡೆ ಮಾಡಲಾಯಿತು.

ಜನ ಪ್ರಕಾಶನ, ಸೌಹಾರ್ದ ಕರ್ನಾಟಕ ಮತ್ತು ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಪ್ರಸಾರಾಂಗದ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ ಕುಲಪತಿಗಳಾದ ಪ್ರೊ. ರಮೇಶ್.ಬಿ. ಏಕಕಾಲಕ್ಕೆ ರಾಜ್ಯದ 23 ಸ್ಥಳಗಳಲ್ಲಿ ಬಿಡುಗಡೆಗೊಂಡ ಈ ಪುಸ್ತಕವನ್ನು ಜನಾರ್ಪಣೆಗೊಳಿಸಿದರು.

ಜಾತಿ, ಧರ್ಮ, ಭಾಷೆಗಳ ಸಂಘರ್ಷದ ತಲ್ಲಣಗಳಿಂದ ಸಾಮಾಜಿಕ ವಿಘಟನೆಯ ಆತಂಕಕಾರಿ ವಾತಾವರಣ ನಿರ್ಮಾಣಗೊಂಡಿದ್ದು ಬರಗೂರು ರಾಮಚಂದ್ರಪ್ಪನವರು ಪ್ರತಿಪಾದಿಸಿರುವ ಸೌಹಾರ್ದತೆ ಮತ್ತು ಸಮಾನತೆಯ ಮೌಲ್ಯಗಳು ಅತ್ಯಂತ ಪ್ರಸ್ತುತವಾಗಿವೆ ಎಂದು ಅವರು ವಿಶ್ಲೇಷಿಸಿದರು.

ದೇಶದಲ್ಲಿ ಹೆಚ್ಚುತ್ತಿರುವ ಸಾಮಾಜಿಕ ಕ್ಷೋಭೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು ಸಂಕುಚಿತ ಮನೋಭಾವಗಳನ್ನು ಮೆಟ್ಟಿನಿಂತು ಮಾನವೀಯ ಮೌಲ್ಯಾಧಾರಿತ ವ್ಯಕ್ತಿತ್ವ ಮತ್ತು ನಾಯಕತ್ವ ಬೆಳೆಸಿಕೊಂಡು ಅಕ್ಷರ ಕ್ರಾಂತಿಯ ನಿಯೋಗಿಗಳಾಗುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು.

ಆಶಯ ಭಾಷಣ ಮಾಡಿದ ಬರಗೂರು ರಾಮಚಂದ್ರಪ್ಪನವರು ಮಾನವತಾವಾದ ಮತ್ತು ಮೂಲಭೂತವಾದದ ನಡುವಿನ ಸಂಘರ್ಷ ತಾರಕಕ್ಕೇರಿರುವ ಇಂದಿನ ಸಂಕೀರ್ಣ ಸನ್ನಿವೇಶದಲ್ಲಿ ಸಾಮಾಜಿಕ ಸ್ವಾಸ್ಥ್ಯ ಕಾಪಾಡಬೇಕಾದ ಅಗತ್ಯವನ್ನು ಬಲವಾಗಿ ಪ್ರತಿಪಾದಿಸಿದರು.

ಪುರೋಹಿತಶಾಹಿ ಮತ್ತು ಬಂಡವಾಳಶಾಹಿ ಶಕ್ತಿಗಳ ಎರಡೂ ಪ್ರಬಲ ಸವಾಲುಗಳನ್ನು ಏಕಕಾಲದಲ್ಲಿ ಎದುರಿಸಬೇಕಾಗಿ ಬಂದಿರುವ ಸಂದರ್ಭದಲ್ಲಿ ಸೌಹಾರ್ದ ಭಾರತ ಪರಿಕಲ್ಪನೆಯ ಸಂದೇಶ ಜನಾಕ್ಷರ ಆಂದೋಲನವಾಗಿ ರೂಪುಗೊಳ್ಳಬೇಕೆಂದು ಅವರು ಆಶಿಸಿದರು.

ದಂಡಿ ಸತ್ಯಾಗ್ರಹದ ವೇಳೆ ಗಾಂಧೀಜಿಯವರು ಒಂದು ಹಿಡಿ ಉಪ್ಪನ್ನು ಹಾಗೂ ಮಹಾಡ್ ಸತ್ಯಾಗ್ರಹದ ವೇಳೆ ಅಂಬೇಡ್ಕರ್ ಅವರು ಒಂದು ಬೊಗಸೆ ನೀರನ್ನು ಎತ್ತಿಹಿಡಿಯುವ ಮೂಲಕ ಸ್ವಾಭಿಮಾನದ ಕಹಳೆ ಮೊಳಗಿಸಿದರೆಂದು ಅವರು ಉಲ್ಲೇಖಿಸಿದರು.

ಆದಿ ಕವಿ ಪಂಪನ "ಮನುಷ್ಯ ಜಾತಿ ತಾನೊಂದೇ ವಲಂ" ಎಂಬ ನುಡಿಮುತ್ತುಗಳನ್ನು ಪ್ರಸ್ತಾಪಿಸಿದ ಅವರು ಬುದ್ಧ, ಬಸವಾದಿ ಶರಣರ ತತ್ವ- ಚಿಂತನೆಗಳ ಪರಂಪರೆಯನ್ನು ಯುವಪೀಳಿಗೆಗೆ ತಲುಪಿಸಬೇಕೆಂದು ಅವರು ಸಲಹೆಯಿತ್ತರು.

ಇತ್ತೀಚೆಗೆ ಗೌರವ ಡಾಕ್ಟರೇಟ್ ಹಾಗೂ ವಿಶೇಷ ಪ್ರಶಸ್ತಿಗಳಿಗೆ ಭಾಜನರಾದ ಚಲನಚಿತ್ರ ರಂಗದ ಗಣ್ಯರಾದ ಡಾ.ರಾಜೇಂದ್ರಸಿಂಗ್ ಬಾಬು, ಡಾ.ಜಯಮಾಲ ಮತ್ತು ಸುಂದರರಾಜ್ ಅವರನ್ನು ಅಭಿನಂದಿಸಿದ ಬರಗೂರು ರಾಮಚಂದ್ರಪ್ಪನವರು ತಮ್ಮ ಪುಸ್ತಕದ ಗೌರವ ಪ್ರತಿಗಳನ್ನು ಅರ್ಪಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ಲೇಖಕಿಯರ ಸಂಘದ ಮಾಜಿ ಅಧ್ಯಕ್ಷರಾದ ಡಾ.ಎಚ್.ಎಲ್.ಪುಷ್ಪ ಮಾತನಾಡಿ ದ್ವೇಷದ ಪರಾಕಾಷ್ಠೆಯ ಸದ್ಯದ ಪರಿಸ್ಥಿತಿಯಲ್ಲಿ ಜನರಲ್ಲಿ ವೈಚಾರಿಕ ಜಾಗೃತಿ ಮೂಡಿಸುವ ತುರ್ತು ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ರಾಜ್ಯದ ವಿವಿಧೆಡೆ ನಡೆಯುತ್ತಿರುವ ಮರ್ಯಾದಾ ಹತ್ಯೆ ಪ್ರಕರಣಗಳ ಬಗ್ಗೆ ವಿಶೇಷ ಗಮನ ಸೆಳೆದ ಅವರು ಈ ಸಂಬಂಧ ಕರ್ನಾಟಕ ಸರ್ಕಾರ ಇತ್ತೀಚೆಗೆ ರೂಪಿಸಿರುವ ನೂತನ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕೆಂದು ಆಗ್ರಹಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಾಜಿ ವಿಧಾನಸಭಾಧ್ಯಕ್ಷರಾದ ರಮೇಶ್ ಕುಮಾರ್ ಮಾತನಾಡಿ ರಾಮಜನ್ಮಭೂಮಿ ಚಳವಳಿ ಮೂಲಕ ರಕ್ತಪಾತದ ರಾಜಕಾರಣಕ್ಕೆ ನಾಂದಿ ಹಾಡಿದ ಮತಾಂಧ ಶಕ್ತಿಗಳು ದೇಶದಲ್ಲಿ ಅಸಹಿಷ್ಣುತೆಯ ವಾತಾವರಣ ಸೃಷ್ಟಿಸಿದ್ದಾರೆಂದು ಟೀಕಿಸಿದರು.


ಧರ್ಮಗಳಿರುವುದು ಮನುಷ್ಯರಿಗಾಗಿಯೇ ಹೊರತು ಅದಕ್ಕೆ ತದ್ವಿರುದ್ಧವಲ್ಲ ಎಂಬ ಅಂಬೇಡ್ಕರ್ ಅವರ ನಿಲುವನ್ನು ಸಮರ್ಥಿಸಿದ ಅವರು ದ್ವೇಷ ರಾಜಕಾರಣವನ್ನು ಹಿಮ್ಮೆಟ್ಟಿಸಿ ಸೌಹಾರ್ದ ಭಾರತ ಕಟ್ಟಲು ಎಲ್ಲ ನೈಜ ದೇಶಪ್ರೇಮಿಗಳೂ ಮುಂದಾಗಬೇಕೆಂದು ಅವರು ಮನವಿ ಮಾಡಿದರು.

ವಿವಿಧ ಜನಪರ ಸಂಘಟನೆಗಳ ಪ್ರತಿನಿಧಿಗಳಾದ ಮಾವಳ್ಳಿ ಶಂಕರ್, ಡಾ.ಮೋಹನ್ ರಾಜ್, ಜ್ಯೋತಿ ಅನಂತ ಸುಬ್ಬರಾವ್, ಮಲ್ಲಿಗೆ, ಡಾ. ಎಸ್.ವೈ. ಗುರುಶಾಂತ್, ರಾಜಶೇಖರಮೂರ್ತಿ ಮತ್ತು ಪ್ರಸಾರಾಂಗ ನಿರ್ದೇಶಕರಾದ ಡಾ. ತಾಂಡವಗೌಡ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಡಾ.ಅಖ್ತರ್ ಮತ್ತು ಡಾ.ಮಂಜು.ಸಿ.ಎನ್. ಕಾರ್ಯಕ್ರಮ ನಿರೂಪಿಸಿದರು.




ಜನ ಪ್ರಕಾಶನ
ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ
Dr. Manmohan Singh Bengaluru City University
ಜನ ಪ್ರಕಾಶನ, ಸೌಹಾರ್ದ ಕರ್ನಾಟಕ ಮತ್ತು ಪ್ರಸಾರಾಂಗ, ಡಾ. ಮನಮೋಹನಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ
ಸಂಯುಕ್ತಾಶ್ರಯದಲ್ಲಿ
ನಾಡೋಜ ಬರಗೂರು ರಾಮಚಂದ್ರಪ್ಪನವರ
ಒಂದೇ ದಿನ
23 ಊರುಗಳಲ್ಲಿ


ಜನ ಪ್ರಕಾಶನ, ಸೌಹಾರ್ದ ಕರ್ನಾಟಕ ಮತ್ತು ಪ್ರಸಾರಾಂಗ, ಡಾ. ಮನಮೋಹನಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ
ಸಂಯುಕ್ತಾಶ್ರಯದಲ್ಲಿ
ನಾಡೋಜ ಬರಗೂರು ರಾಮಚಂದ್ರಪ್ಪನವರ
ಸೌಹಾರ್ದ ಭಾರತ
ಸಮಾನತೆಯ ಸ್ನೇಹಿತ
ಕೃತಿಯ ಜನಾರ್ಪಣೆ ಸಮಾರಂಭ
ಒಂದೇ ದಿನ
23 ಊರುಗಳಲ್ಲಿ
ಜನಾರ್ಪಣೆ
ಇದು ಪುಸ್ತಕ
ಜನಾರ್ಪಣೆ ಮಾತ್ರವಲ್ಲ,
ಜನಾಕ್ಷರ
ಆಂದೋಲನ


ನಾಡೋಜ ಬರಗೂರು ರಾಮಚಂದ್ರಪ್ಪನವರ
ಒಂದೇ ದಿನ
23 ಊರುಗಳಲ್ಲಿ


Dr. Manmohan Singh
Bengaluru City University
ಜನ ಪ್ರಕಾಶನ, ಸೌಹಾರ್ದ ಕರ್ನಾಟಕ ಮತ್ತು ಪ್ರಸಾರಾಂಗ, ಡಾ. ಮನಮೋಹನಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ
ಸಂಯುಕ್ತಾಶ್ರಯದಲ್ಲಿ
ನಾಡೋಜ ಬರಗೂರು ರಾಮಚಂದ್ರಪ್ಪನವರ
ಒಂದೇ ದಿನ
23 ಊರುಗಳಲ್ಲಿ